ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿ.ಸಿ. ಸಂಖ್ಯೆ: 755/2025**

ಫ್ರಾಸಾ – 6

ಚಾಸಾ – **8**

**ಸಾಕ್ಷಿಯು ದಿಃ 08.04.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಎಂ.ಎಸ್ ಶಿವಶಂಕರಪ್ಪ |
| ತಂದೆಯ ಹೆಸರು | : | ಲೇ. ಶಿವಪ್ಪ |
| ವಯಸ್ಸು | : | 61 ವರ್ಷ |
| ವೃತ್ತಿ | : | ನಿವೃತ್ತ ಪಿಎಸ್ಐ |
| ವಾಸಸ್ಥಳ | : | ಮಾದಲವಾಡಿ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿ ರವರಿಂದ :–**

ಜನವರಿ 2017 ರಿಂದ ಅಗಸ್ಟ್ 2022 ರವರೆಗೆ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 30.10.2021 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ 1 ದೂರನ್ನು ಸ್ವೀಕರಿಸಿ ಠಾ.ಮೊ. ಸಂಖ್ಯೆ 309/2021 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷಿಯು ನಿಪಿ 1 ದೂರಿನಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರ್ತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 4 ಎಂದು ಗುರ್ತಿಸಲಾಯಿತು.

3. ದಿಃ 04.11.2021 ರಂದು ಚಾಸಾ 4 ರವರು ತೋರಿಸಿದ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡಿ ವಿಷಯ ತಿಳಿಸಿ ಅವರು ಒಪ್ಪಿದ ಮೇರೆಗೆ ಬೆಳಿಗ್ಗೆ 11 ರಿಂದ 11.45 ಗಂಟೆಯವರೆಗೆ ಪಂಚನಾಮೆ ಸಾಕ್ಷಿಗಳ ಸಮಕ್ಷಮ ನಿಪಿ 2 ಸ್ಥಳ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ ಎಂದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ 2(ಡಿ) ಎಂದು ಗುರ್ತಿಸಲಾಯಿತು. ನಿಪಿ 2 ರ ಸಮಯದಲ್ಲಿ ಚಾಸಾ 1 ರವರು ಹಾಜರುಪಡಿಸಿದ ಮುದ್ದೆ ಮಾಲು 1 ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ದಿನ ನಂತರ ಠಾಣೆಗೆ ಬಂದು ಮುದ್ದೆ ಮಾಲನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ ಚಾಸಾ 4 ಮತ್ತು 5 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ.

4. ದಿನಾಂಕ 06.11.2021 ರಂದು ಚಾಸಾ 1 ರವರ ಮರು ಹೇಳಿಕೆ ದಾಖಲಿಸಿರುತ್ತೇನೆ. ದಿನಾಂಕ 10.11.2021 ರಂದು ಆರೋಪಿಗಳು ಠಾಣೆಗೆ ಹಾಜರಾದ ಮೇರೆಗೆ ಕಲಂ 41(ಎ) ದಂಡ ಪ್ರಕ್ರೀಯ ಸಂಹಿತೆಯಡಿ ನೋಟೀಸ್ ಜಾರಿ ಮಾಡಿ, ಜಾಮೀನಿನ ಮೇರೆಗೆ ಬಿಟ್ಟಿರುತ್ತೇನೆ. ದಿನಾಂಕ 26.02.2022 ರಂದು ಚಾಸಾ 1 ರವರ ಬಾಬ್ತು ನಿಪಿ 3 ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ತನಿಖೆ ಪೂರ್ಣಗೊಂಡಿದ್ದು ಆರೋಪಿಗಳ ವಿರುದ್ಧ ಆರೋಪ ಸಾಬಿತಾದ್ದರಿಂದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಗೈರು ಹಾಜರಿದ್ದು ಗುರ್ತಿಸುವಿಕೆಯ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಲಾಯಿತು.

**ಪಾಟೀ ಸವಾಲು :– ಆರೋಪಿಗಳ ಪರ ವಕೀಲರಿಂದ**

ದೂರುದಾರರು ದೂರನ್ನು ಎಲ್ಲಿ ಟೈಪ್ ಮಾಡಿಸಿ ಬಂದಿದ್ದರು ಎಂದು ನಾನು ವಿಚಾರಣೆ ಮಾಡಿಲ್ಲ. ಪಂಚನಾಮೆ ಸಾಕ್ಷಿಗಳಿಗೆ ಲಿಖಿತ ನೋಟೀಸ್ ನೀಡಿಲ್ಲ. ಪಂಚನಾಮೆ ಸಾಕ್ಷಿಗಳು ಸ್ಥಳದಲ್ಲಿದ್ದು ನಾನು ಕರೆದಿರುತ್ತೇನೆ. ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ ಮತ್ತು ಸ್ಥಳದಲ್ಲಿ

ಪಂಚನಾಮೆ ಮಾಡಿ ಸಹಿ ಪಡೆದಿಲ್ಲ ಹಾಗೂ ಮುದ್ದೆ ಮಾಲು 1 ನ್ನು ವಶ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರವನ್ನು ಕೇಸಿಗೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ 1 ರವರ ಮರು ಹೇಳಿಕೆ ಮತ್ತು ಇತರ ಸಾಕ್ಷಿಗಳ ಹೇಳಿಕೆ ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕಷ್ಟು ಸಾಕ್ಷ್ಯಧಾರಗಳು ಇಲ್ಲದೇ ಇದ್ದರೂ ಆರೋಪಿಗಳ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ